ಶ್ರೀ ಎಚ್. ಎಂ. ಚನ್ನಬಸಪ್ಪ.—ಅನುಮಾನಕ್ಕೆ ಎಡೆ ಇಲ್ಲದೆ ಸ್ಪಷ್ಟವಾಗಿ ಅಚ್ಚ ಕನ್ನಡದಲ್ಲಿ ಯಾವ್ಯಾವ ಸಂದರ್ಭದಲ್ಲಿ ಯಾವ್ಯಾವ ರೀತಿ ಮಾಡುತ್ತಾರೆಂದು ಅದರಲ್ಲಿ ತಿಳಿಸಿದೆ. ೧೯ ಪಾಯಂಟ್ಸ್ ಕಾರ್ಯಕ್ರಮದ ಪಟ್ಟಿಯನ್ನು ಕೊಟ್ಟಿದ್ದೇವೆ. ಯಾರು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆಯೋ ಅಂತಹವರ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಇತರರ ವಿಷಯದಲ್ಲಿ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ಯಾರಿಗಾದರೂ ಅಡ್‌ವರ್ಸ್ ಪೊಜಿಷನ್ನಿನಿಂದ ಜಮೀನು ಸೇರಿದೆಯೆಂದು ಹೇಳಿದ್ದರೆ ಅಂತಹವರು ಅಡ್‌ವರ್ಸ್ ಪೊಜಿಷನ್ನಿನಲ್ಲಿ ಬಂದಿರುವಾಗ ತಕ್ಕ ದಾಖಲಾತಿಗಳನ್ನು ಕೊಡಬೇಕಾಗುತ್ತದೆ.

I. S. S. List of Deputy Tahsildars, Junior Engineers and First Division Clerks.

659. SRI SRINIVASULU NAYUDU (Shanthinagar).—Will the Chief Minister be pleased to state :—

The reasons for the inordinate delay in the finalisation of I. S. S. list of :—

(i) Deputy Tahsildars,

(ii) Junior Engineers,

(iii) First Division Clerks of Public Works Department ?

SRI H.M. CHANNABASAPPA (Minister for Public Works).—On behalf of SRI D. DEVARAJ URS [Chief Minister].—

(*i*) The State Government had earlier decided to publish only the Division wise inter-state seniority lists of Deputy Tahsildars. Accordingly, a final inter-state seniority list of Deputy Tahsildars (of Mysore Division) was published in accordance with the decisions of the Government of India on 31st October 1967. On considering the representations received against the provisional inter-state seniority lists of Taluk Sheristelars of Mysore and Bangalore Divisions, Government of India decided during 1969 to publish the list of Deputy Tahsildars on a State-wide basis Accordingly the first provisional State wide inter-state seniority list was published for objections on 22-11-1969. On considering the representations against this list, Government of India advised publication of a revised provisional inter-state seniority list inviting objections. This revised list was published on 1st September, 1973. The objections received against this list are now before the State Advisory Committee for consideration. This list can be finalised and published only on receipt of decisions of the Government of India on the recommendations of the State Advisory Committee.

(*ii*) A final Inter-State seniority list of Junior Engineers in the Public works Department was first published on 26th December 1968 in accordance with the decisions of the Government of India,

Pursuant to the directions of the High Court on certain writ petitions and as advised by the Government of India, a revised provisional inter-state seniority list was notified on 17th January 1973 for objections. After considering the representations in consultation with the State Advisory Committee the Government of India have communicated their decisions. The matter is under consideration of the State Government.

(*iii*) A final inter-state seniority list of First Division Clerks was first published on 28th March 1968 in accordance with the decisions of the Government of India. Pursuant to the directions of the High Court on certain writ petitions, another list was again published in accordance with the decisions of the Government of India on 29th January 1972. This list has been set aside by the High Court. Government of India have requested the State Government to notify a proposal adopting different equation of posts. A revised provisional list will be published shortly.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ತಮ್ಮ ಉತ್ತರದಲ್ಲಿ ಹೇಳಿರುವ ಪ್ರಕಾರ ಅದು ಇನ್ನೂ ಅಪ್ರೈಜರಿ ಕಮಿಟಿಯ ಪರಿಶೀಲನೆಯಲ್ಲಿದೆಯೆಂದು ಕೊಟ್ಟಿದ್ದೀರಿ. ಡೆಪ್ಯುಟಿ ತಹಸೀಲ್ದಾರ್ ಅವರ ಬಗ್ಗೆ ಸೀನಿಯಾರಿಟಿ ಲಿಸ್ಟ್ ಪ್ರೊವಿಷನಲ್ ಆಗಿ 68ರಿಂದ ಬಂದರೂ ಕೂಡ ಇದುವರೆಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಜೂನಿಯರ್ ಇಂಜಿನಿಯರುಗಳ ಬಗ್ಗೆ ಫೈನಲ್ಆಗಿ ಸೀನಿಯಾರಿಟಿ ಲಿಸ್ಟ್ ಪಬ್ಲಿಷ್ ಮಾಡಬೇಕೆಂದು ಕೇಂದ್ರ ಸರ್ಕಾರದಿಂದ ಆದೇಶವಿದ್ದರೂ ಕೂಡ ಇದುವರೆಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಪಿ.ಡಬ್ಲ್ಯೂ.ಡಿ. ಪ್ರಥಮ ದರ್ಜೆಯ ಗುಮಾಸ್ತರ ಬಗ್ಗೆ ಹೈಕೋರ್ಟಿನಲ್ಲಿ ಈ ಪಟ್ಟಿ ಡಿಸ್‌ಮಿಸ್ ಆಗಿದೆ. 1956ನೇ ಇಸವಿಯಿಂದ 76ರವರೆಗೆ ಅಂದರೆ 20 ವರ್ಷಗಳಾದರೂ ನಿಮಗೆ ಇವರ ಸೀನಿಯಾರಿಟಿ ಲಿಸ್ಟ್‌ನ್ನು ಇನ್ನೂ ಪ್ರಿಪೇರ್ ಮಾಡುವುದ ಕ್ಕಾಗಲಿಲ್ಲ, ಅಂದಮೇಲೆ ಅದನ್ನು ಮಾಡುವುದಕ್ಕೆ ಇನ್ನೆಷ್ಟು ವರ್ಷಗಳ ಕಾಲ ಆಗುತ್ತದೆ ?

† ಶ್ರೀ ಹೆಚ್. ಎಂ. ಚನ್ನಬಸಪ್ಪ.—ಕರ್ನಾಟಕ ರಾಜ್ಯ ಸರ್ಕಾರವೇ ಕೈಗೊಳ್ಳತಕ್ಕ ಕಾರ್ಯ ಕ್ರಮ ಇದಾಗಿದ್ದರೆ ನಾವು ನಿರ್ದಿಷ್ಟವಾಗಿ ಇಷ್ಟೆ ಕಾಲದಲ್ಲಿ ಅದನ್ನು ಮಾಡುತ್ತೇವೆಂದು ಹೇಳುತ್ತಿದ್ದೆವು. ಇದು ಯೂನಿವರ್ಸಿಟೀಸ್ ಆಕ್ಟ್‌ನ ಅಲ್ಲಿ ಕೇಂದ್ರ ಸರ್ಕಾರದವರು 1956ರಲ್ಲಿ ಏನು ಆಕ್ಟ್ ಮಾಡಿದ್ದಾರೋ ಮತ್ತು ರಾಜ್ಯ ವಿಭಜನೆಯಾದಾಗ ಒಂದು ನಿಯಮ ಬಾರಿಯಲ್ಲಿತ್ತೋ ಅದರ ಪ್ರಕಾರ ಈ ಅಧಿಕಾರ ಇರತಕ್ಕದ್ದು ಕೇವಲ ಕೇಂದ್ರ ಸರ್ಕಾರಕ್ಕೆ ಮಾತ್ರ. ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಐ.ಎ.ಎಸ್, ಮತ್ತು ಐ.ಸಿ ಎಸ್. ಸೀನಿಯಾರಿಟಿ ಲಿಸ್ಟ್‌ಗಳನ್ನು ಪಬ್ಲಿಷ್ ಮಾಡಬೇಕಾಗಿತ್ತು. ಈ ಮಧ್ಯೆ ಕೆಲವರು ಇಂಟರೆಸ್ಟೆಡ್ ಪಾರ್ಟೀಸ್ ಅಬ್ಜೆಕ್ಷನ್ ಹಾಕುವುದು, ಹೈಕೋರ್ಟಿಗೆ ಹೋಗುವುದು, ತಪೆ ಮಾಡುವುದು—ಇವೆಲ್ಲಾ ಕಾರ್ಯಕ್ರಮಗಳು ಆಗಬೇಕಾಗಿದ್ದುದರಿಂದ ಹೈಕೋರ್ಟ್ ಡೈರೆಕ್ಷನ್ ಮತ್ತು ಕೇಂದ್ರ ಸರ್ಕಾರದ ಡೈರೆಕ್ಷನ್ ಪರಿಪಾಲನೆ ಮಾಡಬೇಕಾಯಿತು. ಒಂದುವೇಳೆ ಅವರು ಹೇಳಿದ ಹಾಗೆ ಪಬ್ಲಿಷ್ ಮಾಡಬೇಕೆಂದರೆ ಪುನಃ ಅಪೀಲು ತಕರಾರು ಬರುತ್ತವೆಂದು ಸರ್ಕಾರ ಅದನ್ನು ಕನ್‌ಸಿಡರ್ ಮಾಡುತ್ತಿದೆ. ಆದ್ದರಿಂದ ಅಡ್ವೈಜಸಿ ಕಮಿಟಿ ಕೂಲಂಕಷವಾಗಿ ಯೋಚನೆಮಾಡಿ ಅವರ ಸಿಫಾರಸಿನ ಮೇಲೆ ಕೇಂದ್ರ ಸರ್ಕಾರ ಅದನ್ನು ಫೈನಲ್ಆಗಿ ಮಾಡಬೇಕಾಗುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಸ್ವಾಮಿ, ತಾವು ಇದುವರೆಗೆ ಕೊಟ್ಟಿರತಕ್ಕಂಥ ಉತ್ತರದಲ್ಲಿ ನಮಗೆ ಅರ್ಥವಾಗುವುದು 20 ವರ್ಷದಿಂದಲೂ ಸಹ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಈ ಬಗ್ಗೆ ಪತ್ರ ವ್ಯವಹಾರ ನಡೆಯುತ್ತಾ ಇವೆ ಎಂದು. ನಾನು ಈ ಸಂದರ್ಭದಲ್ಲಿ ಕೇಳುವುದು ಇಷ್ಟೆ. ಎಷ್ಟೋ ಅಧಿಕಾರಿಗಳು ರಿಟೈರ್ ಆಗಿ ಬಿಟ್ಟಿದ್ದಾರೆ. ಅಲ್ಲದೆ ಅವರಿಗಿರುವ

30 ವರ್ಷ ಸರ್ವಿಸ್‌ನಲ್ಲಿ ಆಗಬೇ 20 ವರ್ಷ ಸರ್ವಿಸ್ ಆಗಿಯೋಗಿ ಬಿಟ್ಟಿರುತ್ತೆ. ಜೊತೆಗೆ ಈ ಅಧಿಕಾರೀ ವರ್ಗದವರು ಯಾರನ್ನೋ ಒಬ್ಬರ ಅನುಕೂಲತೆಗೋಸ್ಕರ ಅವರ ಮೇಲಿನ ಅಭಿಮಾನ ದಿಂದ ಈ ರೀತಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಅನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ? ಒಂದುವೇಳೆ ತಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದರಲ್ಲಿ ಯಾವ ಉದ್ದೇಶವೂ ಇಲ್ಲ, ಯಾವ ದುರುದ್ದೇಶವೂ ಇಲ್ಲ ಮತ್ತು ಯಾರ ಮೇಲೆ ನಮಗೆ ಅಭಿಮಾನವಾಗಲಿ ದುರಭಿಮಾನವಾಗಲಿ ಇಲ್ಲ. ಕಾನೂನು ಪ್ರಕಾರ ನಡೆಸಬೇಕಾಗಿದೆ. ಇದು ಏತಕ್ಕೆ ನಿಧಾನವಾಗಿದೆ ಎಂದರೆ ಇಂಟರ್‌ಸ್ಟೆಡ್ ಪಾರ್ಟೀಸ್ ನವರು ಮಧ್ಯೆ ಮಧ್ಯೆ ಬಂದು ತಡೆ ಆಜ್ಞೆಗಳು ತರತಕ್ಕಂಥಾದ್ದು ಮತ್ತು ಕೋರ್ಟಿನ ಒಂದು ಆದೇಶದಿಂದ ನಿಧಾನವಾಗುತ್ತದೆಯೇ ಹೊರತು ಇನ್ನಾವ ಬೇರೆ ಕಾರಣವೂ ಇಲ್ಲ.

ಶ್ರೀ ಬಿ. ಜಿ. ಬಣಕಾರ್.—ಈ ಸಿನೀಯಾರಿಟಿ ಪಟ್ಟಿ ಜಾರಿಗೆ ಬಂದಂಥಾ ಕಾಲಕ್ಕೆ ಬೆಂಗಳೂರಿ ನಲ್ಲಿರತಕ್ಕಂಥಾ ಅನೇಕ ಅಧಿಕಾರಿಗಳಿಗೆ ಪ್ರತಿಕೂಲವಾಗುತ್ತಿದೆ. ಜಿ.ಎ.ಡಿ. ಡಿಪಾರ್ಟ್‌ಮೆಂಟಿನಲ್ಲಿ ಇದು ನಿಧಾನವಾಗುತ್ತಾ ಇದೆ, ಯಾರಮೇಲೆ ಪ್ರಭಾವಕ್ಕೊಳಗಾಗಿ ಹೀಗೆ ಮಾಡುತ್ತಿದ್ದಾರೆ? ಆದುದರಿಂದ ಇದನ್ನು ಹತ್ತಿಕ್ಕಿ ಇದು ನಿಧಾನವಾಗದೇ ಇರುವ ಹಾಗೆ ಮಾಡಲು ತಕ್ಕ ಕಾರ್ಯ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ನಾವು ಯಾರ ಪ್ರಭಾವಕ್ಕೂ ಒಳಗಾಗುವುದಿಲ್ಲ. ಒಂದು ವೇಳೆ ಹೈಕೋರ್ಟಿನಿಂದ ಆಜ್ಞೆ ಬಂದರೆ ಅದರಂತೆ ನಡೆಯಬೇಕಾಗುತ್ತದೆ. ನಾವು ಯಾರ ಪ್ರಭಾವಕ್ಕೂ ಒಳಗಾಗುವುದಿಲ್ಲ.

ಶ್ರೀ ಕೆ. ಸಿದ್ದಯ್ಯ.—ಈ ಸೀನಿಯಾರಿಟಿ ಲಿಸ್ಟ್‌ನ್ನು ಫೈನಲೈಸ್ ಮಾಡಬೇಕಾದರೆ 3 ವರ್ಷ ಬೇಕೆ ? ಏತಕ್ಕೆ ಇಷ್ಟು ಕಾಲವಿಳಂಬವಾಗುತ್ತದೆ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಕಾಲ ವಿಳಂಬವಾಗುವುದಕ್ಕೆ ಒಬ್ಬರೇ ಕಾರಣರಲ್ಲ ಇದಕ್ಕೆ ನಾನಾ ತರಹ ಕಾರಣಗಳು ಇವೆ. ಇದಕ್ಕೆ ವ್ಯಕ್ತಿಗಳು ಕಾರಣರಾಗಿದ್ದಾರೆ. ನಾನಾ ರೀತಿಯಲ್ಲಿ ಇದು ನಿಧಾನವಾಗುತ್ತಿದೆ. ಫೈನಲ್ ಅಧಿಕಾರ ನಮ್ಮ ಕೈಯಲ್ಲಿ ಇಲ್ಲದೇ ಇರುವುದರಿಂದ ಇದು ವಿಳಂಬವಾಗುವುದಕ್ಕೆ ಕಾರಣವಾಗಿದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.—ಈಗಾಗಲೆ ಈ ಸೀನಿಯಾರಿಟಿ ಲಿಸ್ಟ್ 10 ವರ್ಷ ದಿಂದಲೂ ಪೆಂಡಿಂಗ್ ಇದೆ. ಆದುದರಿಂದ ಈ ವರ್ಷದಲ್ಲಾದರೂ ಕೂಡ ಇದರ ಬಗ್ಗೆ ಅಂತಿಮ ತಿರ್ಮಾನಕ್ಕೆ ಬರುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಅಗತ್ಯವಾಗಿ ಎಷ್ಟು ಶೀಘ್ರದಲ್ಲಿ ಇದನ್ನು ಮಾಡಬೇಕೋ ಅಷ್ಟು ಶೀಘ್ರವಾಗಿ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಾಪುಗೌಡ.—ರಾಜ್ಯ ಸರ್ಕಾರದ ಮಟ್ಟದಲ್ಲಿರತಕ್ಕಂಥಾ ಈ ಲಿಸ್ಟ್‌ಗೆ ಕೇಂದ್ರ ಸರ್ಕಾರದ ಕನ್‌ಕೆರೆನ್ಸ್ ಬೇಕು. ಅವರು ಇನ್ನೂ ಕೊಟ್ಟಿಲ್ಲ. ಈಗಲಾದರೂ ಕೂಡ ಈ ರೀತಿ ನಿಧಾನವಾಗುವುದಕ್ಕೆ ಕಾರಣ ಏನು ಎಂದು ಕಂಡುಹಿಡಿದು ಇದನ್ನು ಆದಷ್ಟು ಬೇಗ ಕಳುಹಿಸಿಕೊಡಿ ಎಂದು ಕೇಂದ್ರ ಸರ್ಕಾರದ ವರಿಗೆ ಕೇಳುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಈ ಬಗ್ಗೆ ಇರತಕ್ಕಂಥಾ ರಾಜ್ಯ ಸರ್ಕಾರದ ತಕರಾರುಗಳನ್ನು ಪರಿಶೀಲನೆ ಮಾಡುವುದಕ್ಕೆ ಮತ್ತು ಈ ಬಗ್ಗೆ ಇರುವಂಥಾ ಶಿಫಾರಸ್ಸುಗಳನ್ನೂ ಕೂಡ ಪರಿಶೀಲನೆ ಮಾಡಿ ಅವರು ಕಳುಹಿಸಿಕೊಡುವುದಕ್ಕೆ ನಾವು ಅವರಿಗೆ ಮಿನಿಮಮ್ ಟೈಂ ಕೊಡಲೇ ಬೇಕಾಗುತ್ತದೆ. ಇದನ್ನು ಆದಷ್ಟು ಬೇಗ ಪಬ್ಲಿಷ್ ಮಾಡಬೇಕು ಎಂದು ನಾನು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡುತ್ತಿದ್ದೇನೆ.